ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – 560 001

ಸಂಖ್ಯೆ:ಸಶಿಅ/ಹೆಮಶಿ/ಕೆಕೆಜಿಬಿವಿ/163/2012–13 ದಿನಾಂಕ:13.12.2013

## ಜ್ಞಾಪನ

**ವಿಷಯ:**ಕರ್ನಾಟಕ–ಕೆಜಿಬಿವಿ ವಸತಿ ನಿಲಯಗಳ ಬ್ಯಾಂಕ್ ಖಾತೆಗಳನ್ನು ಎಸ್.ಬಿ.ಎಂ ಶಾಖೆಗಳಲ್ಲಿ ತೆರೆಯದಿರುವ ಬಗ್ಗೆ ಕಾರಣ ಕೇಳಿ ನೋಟೀಸ್‌ಬಗ್ಗೆ

**ಉಲ್ಲೇಖ:** 1) ಈ ಕಚೇರಿ ಪತ್ರ ಸಮಸಂಖ್ಯೆ ದಿನಾಂಕ:24.05.2013 ಮತ್ತು 24.09.2013
2) ಈ ಕಚೇರಿಕಾರಣ ಕೇಳಿ ನೋಟೀಸ್‌ಪತ್ರಸಮಸಂಖ್ಯೆ ದಿನಾಂಕ:03.10.2013

----

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ರಾಜ್ಯ ವಿಶೇಷ ಅಭಿವೃದ್ಧಿಯೋಜನೆಯಅನ್ವಯರಾಜ್ಯದಲ್ಲಿ ಪ್ರಾರಂಭಿಸಿರುವ 68 ಕರ್ನಾಟಕ–ಕೆಜಿಬಿವಿ ವಸತಿ ನಿಲಯಗಳ ಆವರ್ತಕ ವೆಚ್ಚಗಳ ನಿರ್ವಹಣೆಯನ್ನು 2012–13ನೇ ಸಾಲಿನಿಂದ ಸರ್ವ ಶಿಕ್ಷಣ ಅಭಿಯಾನ, ರಾಜ್ಯಯೋಜನಾ ನಿರ್ದೇಶಕರಕಚೇರಿಯಿಂದ ನಿರ್ವಹಿಸಲಾಗುತ್ತಿದೆ. ಸದರಿ ವಸತಿ ನಿಲಯಗಳಿಗೆ ಅನುದಾನ ಬಿಡುಗಡೆ ಮಾಡಿ, ವೆಚ್ಚಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವದೃಷ್ಟಿಯಿಂದಉಲ್ಲೇಖ(1)ರ ಪತ್ರ ದಿನಾಂಕ:24.5.2013ರಂತೆ ಸರ್ವ ಶಿಕ್ಷಣ ಅಭಿಯಾನರಾಜ್ಯಕಚೇರಿಯಿಂದ 68 ಕೆಕೆಜಿಬಿವಿಗಳ ಹೆಸರುಗಳಲ್ಲಿ, ಸ್ಟೇಟ್ ಬ್ಯಾಂಕ್ಆಫ್ ಮೈಸೂರು, ಮಾಧವನಗರ ಶಾಖೆ, ಬೆಂಗಳೂರು ಇಲ್ಲಿ ಹೊಸ ಖಾತೆಗಳನ್ನು ತೆರೆದು, ಸದರಿ ಖಾತೆಗಳಿಗೆ ರೂ.420.00 ಲಕ್ಷಅನುದಾನವನ್ನು ಬಿಡುಗಡೆ ಮಾಡಲಾಯಿತು.

ಈ ಕಚೇರಿಯಲ್ಲಿ ನಡೆದಡಿಡಿಪಿಐ/ಡಿವೈಪಿಸಿಗಳ ಸಭೆಯಲ್ಲಿ ಈ ಬ್ಯಾಂಕ್ ಖಾತೆಗಳ ಅರ್ಜಿ ನಮೂನೆಗಳನ್ನು (ಬ್ಯಾಂಕ್ಖಾತೆ ಸಂಖ್ಯೆಯೊಂದಿಗೆ) ನೀಡಿ ಸಂಬಂಧಿಸಿದ ಕೆಕೆಜಿಬಿವಿ ಹೆಸರಿನಲ್ಲಿ ಸಂಬಂಧಿಸಿದ ಬ್ಲಾಕ್ ಬಿ.ಇ.ಓರವರು ಹತ್ತಿರದಎಸ್.ಬಿ.ಎಂ ಬ್ಯಾಂಕ್ ಶಾಖೆಗಳಲ್ಲಿ ಕೆ.ವೈ.ಸಿ ದಾಖಲೆಗಳನ್ನು ನೀಡಿ ಸದರಿ ಬ್ಯಾಂಕ್ ಖಾತೆಗಳನ್ನು ಚಾಲನೆಗೊಳಿಸುವಂತೆ ಸೂಚಿಸಲಾಗಿತ್ತು.

ಅನೇಕ ಬಾರಿಉಪನಿರ್ದೇಶಕರ/ಡಿವೈಪಿಸಿಗಳ ಸಭೆಗಳಲ್ಲಿ ಸದರಿ ಬ್ಯಾಂಕ್ ಖಾತೆಗಳನ್ನು ಚಾಲನೆಗೊಳಿಸುವಂತೆ ಸೂಚನೆಗಳನ್ನು ನೀಡಿದ್ದರು.ಇದುವರೆಗೂ ಈ ಕೆಳಕಂಡ 33 ಕೆಕೆಜಿಬಿವಿಗಳ ಹತ್ತಿರದ ಸ್ಟೇಟ್ ಬ್ಯಾಂಕ್ಆಫ್ ಮೈಸೂರು ಶಾಖೆಗಳಲ್ಲಿ ಕೆ.ವೈ.ಸಿಗಳನ್ನು ನೀಡಿ ಬ್ಯಾಂಕ್ ಖಾತೆಗಳನ್ನು ತೆರೆದು ಚಾಲನೆಗೊಳಿಸಿರುವುದಿಲ್ಲ. ಕಾರಣ ಕೆಕೆಜಿಬಿವಿಗಳಿಗೆ ಅನುದಾನ ಬಿಡುಗಡೆ ಮಾಡಲುಅಡ್ಡಿಯಾಗುತ್ತಿದ್ದು, ಇದಕ್ಕೆಜಿಲ್ಲೆಯಉಪನಿರ್ದೇಶಕರು(ಆ), ಡಿವೈಪಿಸಿ ಮತ್ತು ಸಂಬಂಧಿಸಿದ ಬ್ಲಾಕ್‌ನ ಬಿಇಓಗಳು ಕಾರಣರಾಗಿರುತ್ತೀರಿ. ಚಾಲನೆಗೊಳಿಸದ (**Non Operative**) ಬ್ಯಾಂಕ್ ಖಾತೆಗಳ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.ಉಲ್ಲೇಖ(2)ರಲ್ಲಿ ಈಗಾಗಲೇ ಕಾರಣ ಕೇಳಿ ನೋಟೀಸ್ ನೀಡಿದ್ದರೂಯಾವುದೇ ಜಿಲ್ಲೆಗಳಿಂದ ಇದುವರೆಗೂಉತ್ತರ ನೀಡಿರುವುದಿಲ್ಲ. 33 ಕೆಕೆಜಿಬಿವಿ ಶಾಲೆಗಳಿಗೆ ಮುಂದಿನ ಕಂತಿನ ಹಣವನ್ನು ಬಿಡುಗಡೆ ಮಾಡಿಲ್ಲದೇಇರುವುದಕ್ಕೆಸಂಬಂಧಿಸಿದ ಡಿಡಿಪಿಐ/ಡಿವೈಪಿಸಿಗಳೇ ಹೊಣೆಗಾರರಾಗಿದ್ದು, ರಾಜ್ಯಯೋಜನಾ ನಿರ್ದೇಶಕರಿಗೆ ನೀವೇ ಇದಕ್ಕೆ ಸಮರ್ಥನೆನೀಡುವ ಮತ್ತು ಮುಂದಿನ ಆಗುಹೋಗುಗಳಿಗೆ ನೀವೇ ಜವಾಬ್ದಾರರಾಗುತ್ತೀರಿಎಂದು ಮತ್ತೊಮ್ಮೆ ತಿಳಿಸಿದೆ.

**ನಿರ್ದೇಶಕರು (ಕಾರ್ಯಕ್ರಮಗಳು)**
**ಸರ್ವ ಶಿಕ್ಷಣ ಅಭಿಯಾನ**

**ಪ್ರತಿಗಳು:**

1. ಸಂಬಂಧಿಸಿದ ಉಪನಿರ್ದೇಶಕರು (ಆ) ರವರಿಗೆಕ್ರಮಕ್ಕಾಗಿ
2. ಸಂಬಂಧಿಸಿದ ಉಪನಿರ್ದೇಶಕರು (ಆ) ರವರ ಮೂಲಕ ಡಿ.ವೈ.ಪಿ.ಸಿ ಮತ್ತು ಬಿ.ಇ.ಓಗಳಿಗೆ ಕ್ರಮ್ಮಕಾಗಿ
3. ಮಾನ್ಯರಾಜ್ಯಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ಮಾನ್ಯರ ಅವಗಾಹನೆಗೆ ತರಲುಕೋರಿದೆ.
4. ಅಪರಆಯುಕ್ತರುಗುಲ್ಬರ್ಗ ಮತ್ತುಧಾರವಾಡರವರ ಅನುಪಾಲನೆಗಾಗಿ ಕೋರಿದೆ.
5. ಮುಖ್ಯ ಲೆಕ್ಕಾಧಿಕಾರಿಗಳು, ಎಸ್.ಎಸ್.ಎ, ಬೆಂಗಳೂರು

ದೂರವಾಣಿ : 080 22483040, 22483041 ಫ್ಯಾಕ್ಸ್ : 22126718 www.schooleducation.kar.nic.in/SSA